ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:- 132 (1787), 133(76), 134(784)

(ಮಾನ್ಯ ಸದಸ್ಯರುಗಳು ಗೈರು ಹಾಜರಿದ್ದರು)

ಮಕ್ಕಳ ಸಮಗ್ರ ಅಭಿವೃದ್ಧಿ ಯೋಜನೆಗಳ ಬಗ್ಗೆ

135(1762) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ರಾಜ್ಯದಲ್ಲಿ ಮಕ್ಕಳ ಸಮಗ್ರ ಕಲ್ಯಾಣಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

2) ಬುದ್ಧಿ ವಿಕಾಸ ಹೊಂದದ ಮಕ್ಕಳ ಬೆಳವಣಿಗೆಗೆ ಸರ್ಕಾರ ಯಾವ ಯೋಜನೆಗಳನ್ನು ರೂಪಿಸಿದೆ?

ಶ್ರೀಮತಿ. ಭಾಗೀರಥಿ ಮರುಳ ಸಿದ್ದನಗೌಡ(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

1) ರಾಜ್ಯದಲ್ಲಿ ಮಕ್ಕಳ ಸಮಗ್ರ ಕಲ್ಯಾಣಕ್ಕಾಗಿ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳು ಈ ಕೆಳಗಿನಂತಿವೆ.

1) ಸಮಗ್ರ ಶಿಶು ಅಭಿವೃದ್ಧಿ ಯೋಜನೆ
2) ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ
3) ಸರ್ವ ಶಿಕ್ಷಣ ಅಭಿಯಾನದಡಿ ಶಾಲಾ ಪೂರ್ವಕ ಕೇಂದ್ರಗಳು
4) ಬಾಲಿಕ ಸಮೃದ್ಧಿ ಯೋಜನೆ
5) ಧೈರ್ಯಸಾಹಸ ಪ್ರಶಸ್ತಿ ಪಡೆದ ಮಕ್ಕಳಿಗೆ ವಿದ್ಯಾಭ್ಯಾಸಕ್ಕಾಗಿ ಶಿಷ್ಯವೇತನ.

2) ಬುದ್ಧಿಮಾಂದ್ಯ ಮಕ್ಕಳ ಬೆಳವಣಿಗೆಗೆ ಸರ್ಕಾರವು ಶಿಕ್ಷಣ ನೀಡುವ ಯೋಜನೆಯನ್ನು ಮತ್ತು ಪೋಷಕರಿಗೆ ವಿಮಾ ಯೋಜನೆಯನ್ನು ರೂಪಿಸಿದೆ.

ಬುದ್ಧಿವಿಕಾಸ ಹೊಂದದ ಮಕ್ಕಳ ಬೆಳವಣಿಗೆಗಾಗಿ ಸರ್ಕಾರವು 18 ವರ್ಷದೊಳಗಿನ ಬಾಲಕರಿಗಾಗಿ ಬುದ್ಧಿಮಾಂದ್ಯ ಮಕ್ಕಳ ಬಾಲಮಂದಿರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ. ಹಾಗೆಯೇ 18 ವರ್ಷದೊಳಗಿನ ಹೆಣ್ಣು ಮಕ್ಕಳಿಗಾಗಿ ಮನೋವಿಕಲ ಬಾಲಕಿಯರ ಬಾಲಮಂದಿರವನ್ನು ಹುಬ್ಬಳ್ಳಿಯಲ್ಲಿ ಸ್ಥಾಪಿಸಲಾಗಿದೆ. ಸದರಿ ಸಂಸ್ಥೆಗಳು ಬಾಲ ನ್ಯಾಯ (ಮಕ್ಕಳ ರಕ್ಷಣೆ ಮತ್ತು ಪೋಷಣೆ) ಕಾಯ್ದೆ 2000 ದನ್ವಯ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಶ್ರಮಿಸುತ್ತಿದೆ. ಅಂದರೆ ಅವರುಗಳಿಗೆ ಊಟ ವಸತಿ ಪಾಲನೆ, ಪೋಷಣೆ, ಮನೋರಂಜನೆ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಮತ್ತು ನಿಯಮಿತವಾಗಿ ವೈದ್ಯಕೀಯ ಪರೀಕ್ಷೆಯನ್ನು ನಿಮಾನ್ಸನ ನುರಿತ ತಜ್ಞರಿಂದ ಹಾಗೂ ಇಲಾಖೆಯ ಬಾಲಮಂದಿರಕ್ಕೆ ಹೊಂದಿಕೊಂಡಿರುವ ಆರೋಗ್ಯ ಘಟಕದ ಮುಖಾಂತರ ವೈದ್ಯಕೀಯ ಸೌಲಭ್ಯ ಒದಗಿಸಲಾಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಛೇರ್ಮನ್‌ರವರೆ, ಈಗಿನ ಪರಿಸ್ಥಿತಿ ಯಾವ ರೀತಿ ಇದೆ ಎಂದರೆ, ಒಬ್ಬರು ಹರಿಕತೆ ಮಾಡುತ್ತಿದ್ದಾಗ ಜನರೆಲ್ಲರೂ ಹೊರಟು ಹೋದರು. ಆಗ ನೀವೇಕೆ ಕುಳಿತುಕೊಂಡಿದ್ದೀರೆಂದು ಅವರು ಕೇಳಿದರು. ಈ ಜಮಖಾನ ನನ್ನದು, ಅದನ್ನು ತೆಗೆದುಕೊಂಡು ಹೋಗುವುದಕ್ಕೆ ಕುಳಿತುಕೊಂಡಿದ್ದೇನೆಂದು ಹೇಳಿದನಂತೆ. ಆ ಪರಿಸ್ಥಿತಿ ಇಲ್ಲಿಯೂ ಕೂಡ ಆಗಿದೆ. ಈಗ ರಾತ್ರಿ 11.00 ಗಂಟೆಯಾಗಿದೆ. ಆದರೂ ಕೂಡ ಪ್ರಶ್ನೆ ಕೇಳದೆ ಹೋಗುವುದು ಸರಿಯಲ್ಲವೆಂದು ಕುಳಿತುಕೊಂಡಿದ್ದೇನೆ. ಈ ಸಂದರ್ಭದಲ್ಲಿ ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಮನವಿ

ಮಾಡಿಕೊಳ್ಳುವುದೇನೆಂದರೆ, ಇಷ್ಟೊಂದು ಕಷ್ಟದ ಸ್ಥಿತಿಯಲ್ಲಿ ಮತ್ತು ಒತ್ತಡದ ಪರಿಸ್ಥಿತಿಯಲ್ಲಿ ಸಭೆಯನ್ನು ಏತಕ್ಕೆ ನಡೆಸಬೇಕು? ತಾವು ಇದರ ಬಗ್ಗೆ ದಯಮಾಡಿ ಒಂದು ತೀರ್ಮಾನ ತೆಗೆದುಕೊಳ್ಳಬೇಕು. ಒಂದು ದಿವಸ ಸದನವನ್ನು ಮುಂದಕ್ಕೆ ಹಾಕಿದ್ದರೆ ಆಕಾಶ ಏನೂ ಬಿದ್ದು ಹೋಗುತ್ತಿರಲಿಲ್ಲ. ಈ ರೀತಿಯಾದಾಗ ಇಲ್ಲಿರತಕ್ಕಂಥ ಅಧಿಕಾರಿಗಳಿಗೆ ಮತ್ತು ಪತ್ರಕರ್ತರಿಗೂ ಕೂಡ ತೊಂದರೆಯಾಗುತ್ತದೆ. ಇವರು ಎಷ್ಟುಸಾರಿ ಪಾಪ, ಹೊರಕ್ಕೆ ಹೋಗಿ ಬಂದರು. ಮತ್ತೆ ಪತ್ರಕರ್ತರಲ್ಲಿ ಕೆಲವರು ಮಹಿಳೆಯರು ಬಂದಿರುತ್ತಾರೆ. ಅವರಿಗೆ ಇಲ್ಲಿ ಸರಿಯಾದ ಶೌಚಾಲಯದ ವ್ಯವಸ್ಥೆ ಇಲ್ಲ. ಇದೆಲ್ಲವನ್ನೂ ತಾವು ದಯಮಾಡಿ ಸ್ವಲ್ಪ ಗಮನಿಸಬೇಕು. ನಾವಂತೂ ಕೂತಿದ್ದೇವೆ ಬಿಡಿ. ನಾವೇನೂ ಎದ್ದು ಹೋಗುವುದಿಲ್ಲ. ಈ ಸದನಕ್ಕೆ ಎತ್ತರವಾದ ಗೌರವವನ್ನು ಕೊಟ್ಟು ನಾವು ಇಲ್ಲಿ ಕುಳಿತುಕೊಂಡಿದೇವೆ. ಮತ್ತೆ ನಾಳೆಬೆಳಿಗ್ಗೆ 9.00 ಗಂಟೆಗೆ ಸದನ ಪ್ರಾರಂಭವಾಗುತ್ತದೆ. ನಾನು ಬೆಳಿಗ್ಗೆ 4.30 ಗಂಟೆಗೆ ಎದ್ದು ಓಡಾಡುವುದಕ್ಕೆ ಹೋಗಬೇಕು. ಮತ್ತೆ 6.30 ಗಂಟೆಗೆ ವಾಪಸ್ಸು ಬಂದು ರೆಡಿಯಾಗಿ ಬೆಳಿಗ್ಗೆ 9.00 ಗಂಟೆಗೆ ಸರಿಯಾಗಿ ಇಲ್ಲಿರಬೇಕು. ಒಂದು ವೇಳೆ ಸರಿಯಾದ ಸಮಯಕ್ಕೆ ಬರದಿದ್ದರೆ ಇಲ್ಲ ನಮಗೆ ಯಡಿಯೂರಪ್ಪನವರ ಕಾಟ ಬೇರೆ ಇದೆ. ಮಾನ್ಯ ಅಧ್ಯಕ್ಷರ ವಿರುದ್ಧ ಮಾನ್ಯ ಯಡಿಯೂರಪ್ಪನವರು ಕೂಗಾಡುತ್ತಾರೆ. ಈ ಪರಿಸ್ಥಿತಿಯಲ್ಲಿ ನಾವು ಯಾರ ಕಾಟವನ್ನು ತೆಡೆದುಕೊಳ್ಳಬೇಕು? ಅದ್ದರಿಂದ ದಯಮಾಡಿ ಸದನವನ್ನು ಬೇಗ ಕರೆಯಿರಿ ಅಥವಾ ಎರಡು ದಿವಸ ಜಾಸ್ತಿ ಸದನವನ್ನು ನಡೆಸಿ. ಈಗ ರಾತ್ರಿ 11.00 ಗಂಟೆಯಾಗಿದೆ. ಇದರಿಂದ, ನಿಮಗೆ ಅಥವಾ ನಿಮ್ಮ ಸರ್ಕಾರಕ್ಕೆ ಏನಾದರೂ ಅನುಕೂಲವಾಗುತ್ತದೆಂದು ತಾವು ಹೇಳಿದರೆ ನಾವು ಪ್ರಮಾಣವಾಗಿ ಕುಳಿತುಕೊಳ್ಳುತ್ತೇವೆ. ಆದರೆ ಇಲ್ಲಿ ಯಾವ ಯಾವುದೇ ಉದ್ದೇಶ ಕೂಡ ಈಡೇರುವುದಿಲ್ಲ. ಇದು ಯಾವರೀತಿಯಾಗಿದೆ ಎಂದರೆ, ಹೆಣ ಗುದ್ದಿ ಬಯ್ಯಿಸಿಕೊಳ್ಳುವ ಹಾಗೆ ಆಗಿದೆ. ಇದಕ್ಕೆ ಏನೂ ಅರ್ಥವಿಲ್ಲ. ಪ್ರಶ್ನೆ ಕೇಳುವುದಕ್ಕೆ ನಮಗೂ ಕೂಡ ಉತ್ಸಾಹ ಬರಬೇಕು. ಅಧಿಕಾರಿಗಳ ಮುಖದಲ್ಲಿ ಕಳೆ ಇಲ್ಲ, ಅದು ಹೋಗಿಬಿಟ್ಟಿದೆ ನಾವು ಏನು ಹೇಳಿದರು ಅವರು ಸುಮ್ಮನೆ ಕುಳಿತುಕೊಂಡು ನೋಡುತ್ತಿದ್ದಾರಷ್ಟೆ. ಅವರು ತಾನೆ ಎಷ್ಟು ಹೊತ್ತು ಕುಳಿತುಕೊಳ್ಳುತ್ತಾರೆ? ನಿಮ್ಮ ಭಯ ಭೀತಿಗೋಸ್ಕರ ಅವರು ಇಲ್ಲಿ ಬಂದು ಕುಳಿತುಕೊಂಡಿರುತ್ತಾರೆ. ಇವರು ಮನೆಗೆ ಬರಲಿಲ್ಲವೆಂದು ಅವರ ಹೆಂಡತಿ ಮಕ್ಕಳು ಕಾಯುತ್ತಿರುತ್ತಾರೆ. ಪಾಪ ಇದು ಅವರ ಹಣೇಬರಹ. ಮತ್ತೆ ಇಲ್ಲಿರತಕ್ಕಂಥ ಪತ್ರಕರ್ತರು ಹೊರಗೆ ಹೋಗುವುದು ಮತ್ತು ಒಳಕ್ಕೆ ಬರುವುದು ಮಾಡಿ ಈ ರೀತಿಯಾಗಿ ಅವರು ಮೂರು ಸಾರಿ ಸಭಾತ್ಯಾಗ ಮಾಡಿದ್ದಾರೆ. ತಾವು ನಿಜವಾದ ಸಭೆಗೆ 3.00 ಗಂಟೆ ಹೊರಕ್ಕೆ ಹೋಗಿರುತ್ತೀರಿ. ಆದರೆ, ಈ ಸದನದ ಪರಿಸ್ಥಿತಿ ಏನು? ಮತ್ತೆ ಇಲ್ಲಿ ಕುಳಿತು ಬರೆದುಕೊಳ್ಳುವಂಥರ ಹಣೇಬರ ನೋಡಿ. ಮೂರು ಜನ ಮಹಿಳೆಯರ ಪರಿಸ್ಥಿತಿ ನೋಡುತ್ತಿದ್ದೇವೆ ಅವರು ಆಗಿನಿಂದ ಬರುವುದು ಮತ್ತು ಹೋಗುವುದನ್ನು ನಾವು ನೋಡುತ್ತಿದ್ದೇವೆ. ಮಾನ್ಯ ಅಧ್ಯಕ್ಷರು ಹೊರಟು ಹೋಗಿ ಈಗ ಮಾನ್ಯ ಅರಗ ಜ್ಞಾನೇಂದ್ರರವರನ್ನು ಅಧ್ಯಕ್ಷಸ್ಥಾನದಲ್ಲಿ ಕುಳ್ಳರಿಸಿದ್ದಾರೆ. ಅವರು ಭಾಷಣ ಮಾಡುವ ಹಾಗೇ ಇಲ್ಲ. ಪಾಪ, ಅವರು ಅಲ್ಲಿ ಕುಳಿತುಕೊಳ್ಳಲಿ, ಅವರ ಹಣೇಬರಹ ನಾವೇನೂ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇದು ಸರಿಯಾದ ಕ್ರಮವಲ್ಲ. ಇನ್ನೊಂದು ದಿವಸ ಅಂದರೆ ಸೋಮವಾರದವರೆಗೆ ಸದನವನ್ನು ಮುಂದುವರಿಸೋಣವೆಂದು ಮಾನ್ಯ ವಿರೋಧಪಕ್ಷದ ನಾಯಕರಾಗಿರುವ ಮಾನ್ಯ ಯಡಿಯೂರಪ್ಪನವರಿಗೆ ನಾವು ಹೇಳಿದೂ ಆಯಿತು. ಇದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗ ನನ್ನ ಪ್ರಶ್ನೆ ಬಗ್ಗೆ ಮಾತನಾಡುವುದಕ್ಕೆ

ಇಷ್ಟಪಡುತ್ತೇನೆ. ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ. ಈ ಇಂದಿರಾ ಪ್ರಿಯದರ್ಶಿನಿ ಮಕ್ಕಳ ಪುಸ್ತಕಭಂಡಾರ ಈ ಕಬ್ಬನ್ ಪಾರ್ಕ್ ಉದ್ಯಾನವನದಲ್ಲಿ ಇತ್ತು. ಈಗ ಅದು ಬರೇ ಇಂದಿರಾ ಪ್ರಿಯದರ್ಶಿನಿ ಮಕ್ಕಳ ಪುಸ್ತಕಭಂಡಾರ, ಎಂದು ಹೊರಗಡೆ ನಾಮಫಲಕ ಇದೆ. ಆದರೆ ಒಳಗಡೆ ಪುಸ್ತಕ ಇಲ್ಲ. ಈ ವಿದ್ಯುಚ್ಛಕ್ತಿ ಇಲಾಖೆಯ ಬೋಲ್ಟ್ ನಟ್ಟುಗಳೂ, ಅಲ್ಲಿರತಕ್ಕ ರಬ್ಬರ್‌ಗಳು, ಈ ಕಳ್ಳಭಟ್ಟಿ ಎಲ್ಲವನ್ನೂ ಅಲ್ಲಿ ತುಂಬಿ ಬಿಟ್ಟಿದ್ದಾರೆ. ತಾವು ಸ್ವಲ್ಪ ನಾಳೆನೇ ಹೋಗಿ ನೋಡಿದರೆ ಎಷ್ಟರಮಟ್ಟಿಗೆ ಈ ಮಕ್ಕಳ ಪುಸ್ತಕ ಭಂಡಾರ ರಕ್ಷಣೆ ಆಗುತ್ತಿದೆ? ಎಂದು ಗೊತ್ತಾಗುತ್ತದೆ. ಇಂದಿರಾ ಪ್ರಿಯದರ್ಶಿನಿ ಪುಸ್ತಕಭಂಡಾರ ಒಂದು ಒಳ್ಳೆಯ ಸದುದ್ದೇಶದಿಂದ ಆರಂಭ ಆದದ್ದು. ಅದು ಅಲ್ಲಿ ಕಬ್ಬನ್ ಉದ್ಯಾನವನದಲ್ಲಿದೆ. ತಾವು ಖಂಡಿತ ಅಲ್ಲಿಗೆ ಹೋಗಬೇಕು. ಅದು ಸೂಕ್ತ. ಯಾವ ಮಕ್ಕಳೂ ಅಲ್ಲಿಗೆ ಬರುವ ಮಟ್ಟದಲ್ಲಿಲ್ಲ. ಅಲ್ಲಿ ಲೈಟ್ ಇಲ್ಲ, ನೀರು ಇಲ್ಲ. ಅದೊಂದು ರೀತಿ ಕೆಟ್ಟ ಪರಿಸ್ಥಿತಿ ಅಲ್ಲಿ ನಿರ್ಮಾಣ ಆಗಿದೆ. ಅದನ್ನು ಯಾವ ರೀತಿ ಸರಿಪಡಿಸಬೇಕು ಎಂಬುದರ ಬಗ್ಗೆ ತಾವು ಹೋಗಿ ನೋಡಿ. ಎಷ್ಟು ಮಕ್ಕಳು ಅಲ್ಲಿಗೆ ಬರುತ್ತಾರೆ ನೋಡಿ, ಅದರ ಬಗ್ಗೆ ಏನು ಮಾಡುತ್ತೀರಿ ಎನ್ನತಕ್ಕದ್ದನ್ನು ತಾವು ಹೇಳಬೇಕು.

ಶ್ರೀಮತಿ ಭಾಗೀರಥಿ ಮರುಳಸಿದ್ಧಗೌಡ:– ಮಾನ್ಯ ಸಭಾಧ್ಯಕ್ಷರೆ, ಅವರ ಇವತ್ತಿನ ಪ್ರಶ್ನೆ ಬೇರೆ ಇದೆ. ಅದಕ್ಕೆ ಉತ್ತರವನ್ನು ಒದಗಿಸಲಾಗಿದೆ. ಈಗ ಅದನ್ನು ನನ್ನ ಗಮನಕ್ಕೆ ತರುತ್ತಿದ್ದಾರೆ. . . .

ಶ್ರೀ ಆರ್.ವಿ.ದೇಶಪಾಂಡೆ(ಸಹಕಾರ ಸಚಿವರು):– ತಾವು ಪ್ರಶ್ನೆ ಕೇಳಿದ್ದೇ ಬೇರೆ.

ಶ್ರೀ ವಾಟಾಳ್ ನಾಗರಾಜ್:– ಚೆನ್ನಾಗಿದೆ ಇದು. ಪ್ರಶ್ನೆ ಮಕ್ಕಳ ಕಲ್ಯಾಣ ಎಂದ ಮೇಲೆ ಇದು ಮಕ್ಕಳ ಪ್ರಿಯದರ್ಶಿನಿ ಪುಸ್ತಕ ಭಂಡಾರ, ಮಹಿಳೆಯರ ಪ್ರಿಯದರ್ಶಿನಿ ಪುಸ್ತಕ ಭಂಡಾರ ಅಲ್ಲ. ಮಕ್ಕಳ ಪ್ರಿಯದರ್ಶಿನಿ ಪುಸ್ತಕ ಭಂಡಾರದ ಬಗ್ಗೆ ಇನ್ಯಾವ ಪ್ರಶ್ನೆ ಕೇಳೋಣ?

ಛೇರ್ಮನ್:– ತಮ್ಮ ಪ್ರಶ್ನೆಯಲ್ಲಿ 'ರಾಜ್ಯದಲ್ಲಿ ಮಕ್ಕಳ ಸಮಗ್ರ ಕಲ್ಯಾಣಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?' ಎಂದು ಕೇಳಿದ್ದೀರಿ.

ಶ್ರೀ ವಾಟಾಳ್ ನಾಗರಾಜ್:– ಸಮಗ್ರ ಕಲ್ಯಾಣದಲ್ಲಿ ಕಲ್ಯಾಣ ಎಂದರೇನು? ಸಮಗ್ರ ಕಲ್ಯಾಣ ಎಂದರೆ ಅವರ ವಿಕಾಸ, ಅವರು ಬೆಳವಣಿಗೆ ಅವರ ಅಭಿವೃದ್ಧಿ. ಇವೆಲ್ಲಾ ಬರುತ್ತದೆ. ಪುಸ್ತಕ ಭಂಡಾರ ಅದರಲ್ಲಿ ಸೇರುವುದಿಲ್ಲವೇನು? ಅದನ್ನು ಬಿಟ್ಟಿದ್ದಾರೇನು? ಸ್ವಲ್ಪ ಶಬ್ದಕೋಶವನ್ನು ತೆಗೆಯಿರಿ. ಬಿಟ್ಟಿದ್ದಾರೇನೋ ಎಂದು ನೋಡೋಣ.

ಛೇರ್ಮನ್:– ಕಲ್ಯಾಣದಲ್ಲಿ ಯಾವ್ಯಾವ ಕಾರ್ಯಕ್ರಮ ಎಂದು ಹೇಳಿಬಿಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:– ಹೋಗಲಿ. ಈ ಪ್ರಶ್ನೆ ನಾನು ಹೇಳಿದ್ದೇನೆ. ಇದೊಂದು ಮಧ್ಯದಲ್ಲಿ ಹೇಳಿದ್ದೇನೆ. ಇಷ್ಟಾದರೂ ಹೋಗಿ ತಾವು ನೋಡಿಕೊಂಡು ಬರುತ್ತೀರಾ?

ಶ್ರೀಮತಿ ಭಾಗೀರಥಿ ಮರುಳಸಿದ್ಧನಗೌಡ:– ನಾನು ಹೇಳುವುದಕ್ಕೆ ರೆಡಿ ಇದ್ದೇನೆ. ತಾವು ಇವತ್ತು ನನ್ನ ಗಮನಕ್ಕೆ ತಂದಿದ್ದೀರಿ. ಇದು ಬಹಳ ಒಳ್ಳೆಯದಾಯಿತು. ನಾನು ನೋಡಿ ಕೊಂಡು ಬರುತ್ತೇನೆಂಬ ಮಾತು ಹೇಳುತ್ತಾ, ಇದು ಶಿಕ್ಷಣ ಇಲಾಖೆಗೆ ಬರುತ್ತದೆ ಎನ್ನುತಕ್ಕವಿಚಾರ ಕೂಡ ನನ್ನ ಗಮನಕ್ಕೆ ಬಂದಿದೆ. ಆದರು ಕೂಡ ತಾವು ಹಿರಿಯ ಸದಸ್ಯರು ಹೇಳಿದ್ದೀರಿ. ಇದನ್ನು ನೋಡಿಕೊಂಡು ಬಂದು ಇದನ್ನು ಯಾವ ರೀತಿಯಲ್ಲಿ, ನಮ್ಮ ವ್ಯಾಪ್ತಿಗೆ ಬಂದರೆ ನಾನು ಸರಿ ಮಾಡಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– 18 ವರ್ಷದೊಳಗಿನ ಬಾಲಕರಿಗೆ ಬುದ್ಧಿ ಮಾಂದ್ಯ ಮಕ್ಕಳ ಬಾಲ ಮಂದಿರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ ಎಂದು ಹೇಳಿದ್ದೀರಿ. ಇಡೀ ರಾಜ್ಯದಲ್ಲಿ ಪ್ರತಿ ಜಿಲ್ಲೆಯಲ್ಲಿಯೂ ಸ್ಥಾಪಿಸುವುದಕ್ಕೆ ತಾವು ಕ್ರಮ ಕೈಗೊಳ್ಳುತ್ತೀರಾ?

ಶ್ರೀಮತಿ ಬಾಗೀರಥಿ ಮರುಳಸಿದ್ಧನಗೌಡ:– ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ನನ್ನ ಗಮನಕ್ಕೆ ಏನು ವಿಚಾರ ತಂದಿದ್ದಾರೆ, ಅದನ್ನು ಪರಿಶೀಲನೆ ಮಾಡುತ್ತೇನೆ ಎನ್ನತಕ್ಕ ಮಾತನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಪರಿಶೀಲನೆ ಅಲ್ಲ. ಇಲ್ಲಿ 18 ವರ್ಷದೊಳಗಿನ ಬುದ್ಧಿ ಮಾಂದ್ಯ ಮಕ್ಕಳ ಬಾಲಮಂದಿರವನ್ನು ಬೆಂಗಳೂರಿನಲ್ಲೇ ಸ್ಥಾಪಿಸಲಾಗಿದೆ. ಇದು ಬೆಂಗಳೂರಲ್ಲಿ ಮಾತ್ರ ಈ ಮಕ್ಕಳಿಲ್ಲ. ಇಡೀ ರಾಜ್ಯದ ಎಲ್ಲಾ ಕಡೆ ಬರುತ್ತಾರೆ. ಕನಿಷ್ಟ ಜಿಲ್ಲಾ ಕೇಂದ್ರಗಳಲ್ಲಾದರೂ ತಾವು ಈ ರೀತಿ ಬಾಲ ಮಂದಿರಗಳನ್ನು ಸ್ಥಾಪನೆ ಮಾಡುತ್ತೀರಾ?

ಶ್ರೀಮತಿ ಭಾಗೀರಥಿ ಮರುಳಸಿದ್ಧನಗೌಡ:– ಈ ವಿಷಯವನ್ನು ಮನಗಂಡು ತಾವು ಏನು ಹೇಳಿದ್ದೀರಿ, ನಾನು ಅಧಿಕಾರಿಗಳೊಂದಿಗೆ ಚರ್ಚಿಸಿ ಇದನ್ನು ಯಾವ ರೀತಿ ಪ್ರಾರಂಭ ಮಾಡುವುದಕ್ಕೆ ಸಾಧ್ಯತೆ ಆಗುತ್ತದೆ ಎನ್ನತಕ್ಕದ್ದನ್ನು ಮನಗಂಡು ಪ್ರಾರಂಭ ಮಾಡಬೇಕಾಗುತ್ತದೆ ಎನ್ನತಕ್ಕ ಮಾತನ್ನು ತಮ್ಮ ಮುಖಾಂತರ ನಾನು ಮಾನ್ಯ ಸದಸ್ಯರಿಗೆ ತಿಳಿಸಲು ಇಷ್ಟಪಡುತ್ತೇನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 117(1579)

(ಮಾನ್ಯ ಸದಸ್ಯರು ಗೈರುಹಾಜರಿದ್ದರು)

ಅ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು:

ಶ್ರೀ ಆರ್.ವಿ.ದೇಶಪಾಂಡೆ(ಮಾನ್ಯ ಸಹಕಾರ ಸಚಿವರು):– ಮಾನ್ಯ ಅಧ್ಯಕ್ಷರೆ, ದಿನಾಂಕ 04.02.2005ರ 9ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 116 ಪ್ರಶ್ನೆಗಳ ಪೈಕಿ 106 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. xx (ಅನುಬಂಧ–III)

ಛೇರ್ಮನ್:– ಮಂಡಿಸಲಾಯಿತು. ಇಷ್ಟು ಹೊತ್ತಿನ ತನಕ ಸದನವನ್ನು ಸುಗಮವಾಗಿ ನಡೆಸಲಿಕ್ಕೆ ಸಹಕರಿಸಿರತಕ್ಕಂಥ ಸಭಾ ನಾಯಕರು, ಮಂತ್ರಿಗಳು ಮತ್ತು ಹಾಜರಿದ್ದಂತಹ ಎಲ್ಲಾ ಶಾಸಕರುಗಳು ಅಧಿಕಾರಿಗಳು ಮತ್ತು ಪತ್ರಕರ್ತರಿಗೆ ಅಭಿನಂದಿಸಿ ಈಗ ಸದನವನ್ನು ನಾಳೆ ಬೆಳಿಗ್ಗೆ 9.00 ಗಂಟೆವರೆಗೆ ಮುಂದೂಡಲಾಗಿದೆ.

(ಸದನವು ರಾತ್ರಿ 11.15ಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 05ನೇ ಫೆಬ್ರವರಿ 2005ರಂದು ಬೆಳಿಗ್ಗೆ 9.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2005

[2005ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 4]

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ 2003ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು (2004ರ ಕರ್ನಾಟಕ ಅಧಿನಿಯಮ 32) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–